ನೆಗೆಯುತ್ತ ಸಾಗುತ್ತದೆ. ಪ್ರಜ್ಞಾ ಪ್ರವಾಹದ ಹೊಸ ಮಾದರಿಯೊಂದು ಕಾವ್ಯ ಶರೀರದ ರೂಪ ತಳೆದಂತಿದೆ. ಅದರ ಆಳದಲ್ಲಿರುವ ರಾಜಕೀಯ ವಿವೇಕವು ಇತಿಹಾಸ ಮತ್ತು ಸಮಾಜದ ಗತಿಯನ್ನು ಧ್ವನಿಸುತ್ತ, ವರ್ತಮಾನವನ್ನು ಹಿಡಿಯಲು ಭವಿಷ್ಯದ ರೂಪವನ್ನು ಗುರುತಿಸಲು ಪ್ರಯತ್ನಿಸುತ್ತಿದೆ. ಬದಲಾಗುತ್ತಲೇ ಇರುವ ಜಗತ್ತು, ಏನೂ ಬದಲಾಗದ ಹಾಗಿರುವ ಮನುಷ್ಯನ ದಾಹ ದೌರ್ಬಲ್ಯಗಳ ಕಾಣುತ್ತ, ಕೊನೆಗೆ ಇತಿಹಾಸವನ್ನು ಕಟ್ಟುವ ದರ್ಪದ ರಾಜಕಾರಣದ ಎದುರು ನಿಂತ ಕಾವ್ಯ ಹೀಗೆ ಕೊನೆಗೊಳ್ಳುತ್ತದೆ:

ಡಾಂಟೆ ದೇಶಭ್ರಷ್ಟನಾದ ಹೋಲ್ಡರ್ಲಿನ್‌ಗೆ<br>
ಮತಿಭ್ರಮಣೆ<br>
ಎಲ್ಲ ಹೇಳಿದ ನೀತ್ಸೆ ಕೊನೆಗೆ ಮಹಾಮೌನಿ ರಿಲ್ಕೆ<br>
ಅಲೆಮಾರಿ<br>
ಇ.ಪಿ. ಇಟಲಿಯ ತನ್ನ ಮನೆಯಲ್ಲಿ ಗೋಡೆ ನೋಡುತ್ತ<br>
ಕುಳಿತ<br>
ಆದರೂ<br>
ಅವರು ಯಾವಾಗಲೂ ತಮ್ಮ ಕಾವ್ಯಗಳನ್ನು ಕಟ್ಟಿಕೊಂಡೇ<br>
ಇದ್ದರು<br>
ಬಾಕಿ ಇತಿಹಾಸ ಅವುಗಳಲ್ಲಿದೆ

ರಾಜಕಾರಣ ನಿರ್ಮಿಸಿದ ಇತಿಹಾಸಕ್ಕಿಂತ ಕಾವ್ಯದಲ್ಲಿ ಅಡಕವಾಗಿರುವ ಬಾಕಿ ಇತಿಹಾಸವೇ ನಿಜದ ಇತಿಹಾಸ ಎನ್ನುವ ವಿವೇಚನೆ ಇಲ್ಲಿದೆ. ಅದನ್ನು ಇಡೀ ಕಾವ್ಯವು ತನ್ನ ಭಾಷಾ ವೈಭವದಲ್ಲಿ ಬಗೆದು ಹೊರಟಿರುವ ಕ್ರಮ ಹೊಸ ಪಥವೊಂದನ್ನು ತೆರೆದಿಟ್ಟಿದೆ. ಕೆಳಗಿನ ಪ್ರಪಾತಕ್ಕು ಮೇಲಿನ ಆಕಾಶಕ್ಕು ನಡುವಿನ ಅಂಚಿನಲ್ಲಿ ಓದುಗನನ್ನು ಸದಾ ನಡೆಸುತ್ತ ಸಾಗುವ ಈ ಕಾವ್ಯದ ಅನುಭವದ ಪರಿಯೇ ಹೊಚ್ಚ ಹೊಸತು. ಇಲ್ಲಿನ ಮಾತುಗಳು ಈ ಕಾವ್ಯದ ಹರವಿಗೆ ಒಂದು ಸಣ್ಣ ಮುನ್ನೋಟವಷ್ಟೆ. ಅದರ ಸಮಗ್ರತೆಯನ್ನು ಖಂಡಿತಕ್ಕೂ ಹಿಡಿದಿಡದು.

ತಿರುಮಲೇಶರ 'ಅರಬ್ಬಿ', 'ಅಕ್ಷಯ ಕಾವ್ಯ', ಮತ್ತು ಈಗಿನ 'ಅವ್ಯಯ ಕಾವ್ಯ'ವು – ಗ್ರಹಿಕೆಯ ಹೊಸ ಮಾರ್ಗಗಳ ಅನ್ವೇಷಿಸುವ ಅನಿವಾರ್ಯತೆಯನ್ನು ವಿಮರ್ಶಾ ಪ್ರಜ್ಞೆಗೆ ಒದಗಿಸಿಕೊಟ್ಟಿದೆ. ತಿರುಮಲೇಶರೇ ಹೇಳುವಂತೆ ಕೊನೆಗೂ ಕವಿಯ ಪಾಡು:

ವಿರಾಮ ಬೇಡಿದೆ ಯಾಚಿಸಿದೆ ಇಲ್ಲ<br>
ಅದು ತಳವಿರದ ಬಾವಿಗೆ<br>
ಕಲ್ಲೆಸದ ಹಾಗೆ

ಐದು ದಶಕಗಳ ಕಾಲ ಕನ್ನಡದಲ್ಲಿ ಕ್ರಿಯಾಶೀಲ ಕಾವ್ಯವನ್ನು ಸೃಷ್ಟಿಸುತ್ತ ಬಂದಿರುವ ತಿರುಮಲೇಶರ ಕಾವ್ಯ ಪ್ರಯೋಗಗಳು ಸಾಹಿತ್ಯ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅರ್ಹವಾಗಿವೆ. ಅದಕ್ಕೆ ಅವರ ಈ 'ಅವ್ಯಯ ಕಾವ್ಯ'ದ ಪ್ರಮುಖ ಆಕರವಾಗಿದೆ.

**● ವಿಕ್ರಂ ಹತ್ವಾರ್**